ಆ. - ಇಲ್ಲ -

ಇ. ಘೋಷಿತ/ಅಘೋಷಿತ ಕೊಳಚೆ ಪ್ರದೇಶಗಳ ಹೊರಗಡೆ ವಾಸಿಸುವ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ಹಂಚಲು ಅರ್ಜಿಗಳನ್ನು ಕರೆಯುವ ಪ್ರಸ್ತಾವನೆ ಇರುವುದಿಲ್ಲ.

ಬೆಂಗಳೂರು ನಗರದ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆ ವಿತರಣೆ

1880(2157): ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿರುವ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಎಷ್ಟು;

ಆ. ಈ ನ್ಯಾಯಬೇಲೆ ಅಂಗಡಿಗಳಲ್ಲಿ ಹಳದಿ ಕಾರ್ಡುದಾರರಿಗೆ ಸಕ್ಕರೆ ವಿತರಿಸಲಾಗುತ್ತಿದೆಯೇ;

ಇ. ಹಾಗಿದ್ದಲ್ಲಿ, ಸರಾಸರಿ ಪ್ರತಿ ತಿಂಗಳು ಹಳದಿ ಪಡಿತರ ಚೀಟಿದಾರರಿಗಾಗಿ ಎಷ್ಟು ಪ್ರಮಾಣದ ಸಕ್ಕರೆಯನ್ನು ಈ ಅಂಗಡಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ;

ಈ. ಈ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆಯನ್ನು ಯಾವ ದರದಲ್ಲಿ ಮಾರಾಟ ಮಾಡಲಾಗುತ್ತಿದೆ;

ಉ. ಹೊರಗಡೆ ಸಕ್ಕರೆ ಇದಕ್ಕಿಂತ ಕಡಿಮೆ ದರದಲ್ಲಿ ಲಭ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ. ಹಾಗಿದ್ದಲ್ಲಿ, ನ್ಯಾಯಬೆಲೆ ಅಂಗಡಿಗಳಲ್ಲಿ ಮಾರಾಟಮಾಡುವ ಸಕ್ಕರೆ ಬೆಲೆಯನ್ನು ಹೊರಗಡೆಯ ಬೆಲೆಗಿಂತ ಕಡಿಮೆ ದರದಲ್ಲಿ ಮಾರಲು ಸರ್ಕಾರದ ಕ್ರಮ ಕೈಗೊಳ್ಳುತ್ತದೆಯೇ;

ಋ. ನ್ಯಾಯಬೆಲೆ ಅಂಗಡಿಗಳು ಸಕ್ಕರೆಯನ್ನು ಬೇಡಿಕೆ ಇಲ್ಲದ ಕಾರಣ ತೆಗೆದುಕೊಳ್ಳದೇ ಇರುವುದರಿಂದ, ಇಂತಹ ನ್ಯಾಯಬೆಲೆ ಅಂಗಡಿಗಳ ಮೇಲೆ ಸರ್ಕಾರ ಕ್ರಮಕೈಗೊಳ್ಳುವುದನ್ನು ಕೈಬಿಡುತ್ತದೆಯೇ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. 1603

ಆ. ಹೌದು.

ಇ. ಹಳದಿ ಪಡಿತರ ಚೀಟಿಗಳನ್ನು ನಿಯೋಜಿಸಲಾಗಿರುವ 1200 ನ್ಯಾಯಬೆಲೆ ಅಂಗಡಿಗಳಿಗೆ ಸರಾಸರಿ ಎರಡು ಕ್ವಿಂಟಾಲ್‌ನಂತೆ ಸಕ್ಕರೆ ಹಂಚಿಕೆ ಮಾಡಲಾಗುತ್ತಿದೆ.

ಈ. ಕೆ.ಜಿ.ಗೆ. ರೂ. 13.50

ಉ. - ಹೌದು -

ಊ. - ಇಲ್ಲ -

ಋ. ಸಕ್ಕರೆಯ ಬೇಡಿಕೆ ಇಲ್ಲದೆ ಎತ್ತುವಳಿ ಮಾಡದಿದ್ದ ನ್ಯಾಯಬೇಲೆ ಅಂಗಡಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ.

ಬೆಂಗಳೂರು ನಗರದಲ್ಲಿ ವ್ಯವಸ್ಥಿತವಾಗಿ ಸೀಮೆ ಎಣ್ಣೆ ವಿತರಣೆ

1881(2158): ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಪಡಿತರ ಚೀಟಿಗಳ ಮೂಲಕ ಸೀಮೆಎಣ್ಣೆ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?